ಅ) ಮಂಗಳೂರು ಹಳೇ ಬಂದರಿನಲ್ಲಿ ಅಲೆತಡೆ ಗೋಡೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿರುತ್ತದೆ. ಅಳಿವೆಯ ಹೂಳೆತ್ತುವ ಕಾರ್ಯವನ್ನು 1989ನೇ ನವೆಂಬರ್‌ನಲ್ಲಿ ಕೈಗೆತ್ತಿಕೊಂಡಿದ್ದು ಈಗಿನ ಪರಿಸ್ಥಿತಿಯಲ್ಲಿ ಹೂಳೆತ್ತುವುದು ಅಸಾಧ್ಯವೆಂಬ ಕಾರಣದಿಂದಾಗಿ ಕೈಬಿಡಲಾಗಿದೆ.

ಆ) ಬಂದಿದೆ

ಇ) ಅಲೆತಡೆಗೋಡೆಯ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಈ ವರ್ಷದ ಮುಂಗಾರುವಿಗೆ ಮೊದಲು ಈ ಕೆಲಸ ಮುಗಿಯುವ ನಿರೀಕ್ಷೆ ಇಲ್ಲ. ಹೂಳೆತ್ತುವ ಕೆಲಸವನ್ನು ಅಲೆ ತಡೆಗೋಡೆ ನಿರ್ಮಾಣವಾದ ಬಳಿಕ ಕೈಗೆತ್ತಿಕೊಳ್ಳಲಾಗುವುದು.

ಪ್ಲಾಂಟೇಷನ್ ಪ್ರದೇಶದಲ್ಲಿ ಲಿಂಕ್ ರಸ್ತೆಗಳು

1057 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕೆಗೆ ಅನುಕೂಲವಾಗುವಂತೆ ಬಂದರು ಪ್ರದೇಶದಲ್ಲಿ ಸರ್ಕಾರದವರು ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಮಾಡಿರುವುದು ನಿಜವೇ ಹಾಗಿದ್ದಲ್ಲಿ ಮೀನುಗಾರರಿಂದ ಎಷ್ಟು ಆದಾಯ ಸರ್ಕಾರಕ್ಕೆ ಬರುತ್ತಲಿದೆ?

ಆ) ವ್ಯವಸಾಯಗಾರರಿಗೆ ಅನುಕೂಲವಾಗುವಂತೆ ಚಾನಲ್ ಪ್ರದೇಶದಲ್ಲಿ ಸರ್ಕಾರ ಇರಿಗೇಷನ್ ಟ್ರಾಕ್ ರೋಡ್‌ನ್ನು ಮಾಡಿದ್ದಾರೆಯೇ? ಹಾಗಿದ್ದಲ್ಲಿ, ಈ ಜನರಿಂದ ಬರುವ ಆದಾಯವೆಷ್ಟು?

ಇ) ಮಲೆನಾಡಿನ ಪ್ರದೇಶದ ಪ್ಲಾಂಟೇಶನ್ ಏರಿಯಾ ಜನರಿಂದ ಬರುವ ಆದಾಯವೆಷ್ಟು?

ಈ) ಪ್ಲಾಂಟೇಶನ್ ಪ್ರದೇಶದಲ್ಲಿ ಸಾಗಣೆ ಕಾರ್ಯ ಸದಾ ನಡೆಯುತ್ತಿರುವುದರಿಂದ, ಈ ಜನರಿಗೆ ಸರ್ಕಾರದವರು ಅನುಕೂಲ ಕಲ್ಪಿಸಲು ಪ್ಲಾಂಟೇಶನ್ ಲಿಂಕ್ ರೋಟ್ ಅಭಿವೃದ್ಧಿ ಕೆಲಸವನ್ನು ತೆಗೆದುಕೊಳ್ಳಬಾರದೇಕೆ?

ಶ್ರೀ ಎಸ್. ಬಂಗಾರಪ್ಪ, (ಮುಖ್ಯಮಂತ್ರಿಗಳು) :

ಅ) ಹೌದು. ಮೀನುಗಾರರಿಂದ ಯಾವುದೇ ಆದಾಯವನ್ನು ಲೋಕೋಪಯೋಗಿ ಇಲಾಖೆಯು ಸಂಗ್ರಹಿಸುತ್ತಿಲ್ಲ.

ಆ) ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ಆಯಕಟ್ಟು ರಸ್ತೆಗಳನ್ನು ನಿರ್ಮಿಸಲಾಗುತ್ತದೆ. ಈ ಬಗ್ಗೆ ಯಾವುದೇ ಆದಾಯವನ್ನು ಸಂಗ್ರಹಿಸುತ್ತಿಲ್ಲ.

ಇ) ಲೋಕೋಪಯೋಗಿ ಇಲಾಖೆಯು ಯಾವುದೇ ಆದಾಯವನ್ನು ಪ್ಲಾಂಟೇಷನ್ ಏರಿಯಾ ಜನರಿಂದ ಸಂಗ್ರಹಿಸುತ್ತಿಲ್ಲ.

ಈ) ಮಾನ್ಯ ಸದಸ್ಯರ ಪ್ರಸ್ತಾಪವನ್ನು ಪರಿಶೀಲಿಸಲಾಗುವುದು.

ನೀರಾವರಿ ಪಂಪುಸೆಟ್‌ಗಳಿಗೆ ವಿಧಿಸಿರುವ ದುಬಾರಿ ಬಡ್ಡಿ.

1109 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ), ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ರೈತರು ನೀರಾವರಿ ಪಂಪುಸೆಟ್ಟುಗಳ ಬಾಬತ್ತು ಉಳಿಸಿಕೊಂಡಿದ್ದ ದರಗಳ ಮೇಲೆ ಕೆ.ಇ.ಬಿ.ಯವರು ವಿಧಿಸಿದ್ದ ಬಡ್ಡಿಗಳು ಮಾರ್ಜಾಡಿಗಲು ವಿಧಿಸುವ ಬಡ್ಡಿಯ ದರಕ್ಕಿಂತ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?